ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ
ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರಃ 973-2015

ಚಾಸಾ ಃ 1 ಪ್ರಾಸಾ ಃ 1
ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು
ದಿನಾಂಕಃ 17-01-2017

ವಾಗ್ಮೂಲದವರ ಹೆಸರು ಃ ಆನಂದ ಪುತ್ರನ್
ತಂದೆ ಹೆಸರು ಃ ನರಸಿಂಹ ಮರಕಾಲ
ವಯಸ್ಸು ಃ 58 ವರ್ಷ
ಉದ್ಯೋಗ ಃ ವ್ಯಾಪಾರ
ವಾಸಸ್ಥಳ ಃ ಮಣೂರು ಪಡುಕೆರೆ

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದಃ

ಈ ಕೇಸಿನ ಮೂರು ಜನ ಆರೋಪಿತರು ನಮ್ಮ ಮನೆಯ ಆಸುಪಾಸಿನವರಿದ್ದು ಅವರ ಪರಿಚಯ ನನಗೆ ಇದೆ.

2. ದಿ.12.09.2014ರಂದು ರಾತ್ರಿ 9.00ಗಂಟೆ ಸಮಯದಲ್ಲಿ ನಾನು ನನ್ನ ದ್ವಿಚಕ್ರ ವಾಹನದಲ್ಲಿ ಕೊಮೆಗೆ ಹೋಗುವ ಪಡುಕೆರೆ ರಸ್ತೆಯಲ್ಲಿ ಮನೆಗೆ ಹೋಗುತ್ತಿದ್ದಾಗ ಇಬ್ಬರು ವ್ಯಕ್ತಿಗಳು ಆಚೆ ಮತ್ತು ಈಚೆ ಕಡೆಯಿಂದ ಬಂದು ನನ್ನ ಬೈಕ್‌ನ್ನು ನಿಲ್ಲಿಸಿ ಅಡ್ಡ ಹಾಕಿ ಬೈಕ್ ಸಮೇತ ನನ್ನನ್ನು ಕೆಳಗೆ ದೂಡಿ ಹಾಕಿರುತ್ತಾರೆ. ಆಗ ಅವರಲ್ಲಿ ಒಬ್ಬ ವ್ಯಕ್ತಿಯು ನನ್ನ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಕಸಿದುಕೊಂಡು ನಂತರ ಇಬ್ಬರೂ ಓಡಿ ಹೋಗಿರುತ್ತಾರೆ. ನಂತರ ನಾನು ಅವರನ್ನು ಹಿಂಬಾಲಿಸಿದ್ದು ಅವರು ಅಲ್ಲೇ ಇದ್ದ ಒಂದು ಪೊದೆಯ ಒಳಗೆ ಓಡಿ ಹೋಗಿರುತ್ತಾರೆ. ನಾನು ಅವರನ್ನು ಹಿಂಬಾಲಿಸಲು ಗಾಡಿಯಲ್ಲಿ ಹೋಗುತ್ತಿದ್ದಾಗ ರಸ್ತೆ ವಿಭಾಜಕದ ಹತ್ತಿರ ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇನೆ. ನನ್ನ ಅಡ್ಡಕಟ್ಟಿ ಸುಲಿಗೆ ಮಾಡಿರುವ ಇಬ್ಬರು ವ್ಯಕ್ತಿಗಳು ತಮ್ಮ ಮುಖಕ್ಕೆ ಬಟ್ಟೆಯನ್ನು ಕಟ್ಟಿ ಮುಚ್ಚಿದ ಕಾರಣ ಅವರನ್ನು ಆ ದಿನ ನನಗೆ ಗುರುತಿಸಲು ಆಗಲಿಲ್ಲ. ನಾನು ಅಲ್ಲೇ ಮುಂದೆ ಹೋಗುತ್ತಿದಾದಗ ಅಲ್ಲಿ ಒಬ್ಬ ವ್ಯಕ್ತಿಯು ಬರುತ್ತಿದ್ದು ನನ್ನ ಸರ ಸುಲಿಗೆ ಆದ ಬಗ್ಗೆ ಆತನಿಗೆ ತಿಳಿಸಿದ್ದು ಆಗ

ಆ ವ್ಯಕ್ತಿಯು ಇಲ್ಲೇ ಸ್ವಲ್ಪ ಮುಂದೆ ಒಂದು ಬೈಕ್‌ನಲ್ಲಿ ಒಬ್ಬ ವ್ಯಕ್ತಿಯು ನಿಂತಿದ್ದು ನಂತರ ಆತನಜೊತೆಗೆ ಇಬ್ಬರು ವ್ಯಕ್ತಿಗಳು ಬಂದು ನಂತರ ಮೂರುಜನ ಬೈಕ್‌ನಲ್ಲಿ ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದ್ರಿ ಬೈಕ್ ಮತ್ತು ಬೈಕ್‌ನ ಹತ್ತಿರ ಇದ್ದ ವ್ಯಕ್ತಿಯನ್ನು ನಾನು ನೋಡಿರುವುದಿಲ್ಲ.

3. ಅದೇ ದಿನ ರಾತ್ರಿ ನಾನು ಠಾಣೆಗೆ ಹೋಗಿ ವಿಷಯವನ್ನು ತಿಳಿಸಿದ್ದು ಅಲ್ಲೇ ಎಲ್ಲ ಹುಡುಕಾಡಿದಾಗ ಸಿಗದ ಕಾರಣ ಮರುದಿನ ನಾನು ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ದೂರನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಿದೆ. ದೂರನ್ನು ನನ್ನ ಮಗ ಬರೆದಿರುತ್ತಾರೆ. ನನ್ನ ದೂರಿನಲ್ಲಿ ಸುಲಿಗೆ ಮಾಡಿದ ವ್ಯಕ್ತಿಗಳ ವಯಸ್ಸು 25 ವರ್ಷ ಎಂದು ಹೇಳಿರುತ್ತೇನೆ. ಸುಲಿಗೆ ಆದ ಸರವು ಎಂಟು ಗ್ರಾಮ ಇದ್ದು ಅದರ ಬೆಲೆ 18 ಸಾವಿರ ರೂ. ಇತ್ತು,

4. ನಾನು ದೂರು ಕೊಟ್ಟ ದಿನಾವೇ ಪೋಲೀಸರು ನಾನು ತೋರಿಸಿಕೊಟ್ಟಂತೆ ಸುಲಿಗೆ ಆದ ಜಾಗದಲ್ಲಿ ಸ್ಥಳ ತನಿಖೆ ಮಾಡಿ ನನ್ನ ಹಾಗೂ ಸಹ ಪಂಚರ ಸಮಕ್ಷಮ ಮಹಜರು ಕ್ರಮ ಜರುಗಿಸಿ, ನಕಾಶೆಯನ್ನು ಬರೆದು ನನ್ನ ಸಹಿಯನ್ನು ಪಡೆದಿರುತ್ತಾರೆ. ಆ ಕಾಲಕ್ಕೆ ಭಾವಚಿತ್ರವನ್ನು ಸಹ ತೆಗೆದಿರುತ್ತಾರೆ. ಸದ್ರಿ ದಾಖಲೆಗಳನ್ನು ಕ್ರಮವಾಗಿ ನಿ.ಪಿ.2 ಮತ್ತು ನಿ.ಪಿ.3 ಎಂದು, ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ.2(ಎ) ಮತ್ತು ನಿ.ಪಿ.3(ಎ) ಎಂದು ಗುರುತಿಸಿದೆ. ಭಾವಚಿತ್ರವನ್ನು ನಿಪಿ.4 ಎಂದುಗುರುತಿಸಿದೆ.

5. ಕಳುವಾದ ಒಂದೂವರೆ ಎರಡು ತಿಂಗಳ ನಂತರ ಕೋಟ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಅಲ್ಲಿ ನನ್ನ ಸುಲಿಗೆಯಾದ ಸರವನ್ನು ಪೋಲೀಸರು ನನಗೆ ತೋರಿಸಿ ಸದ್ರಿ ಸರವನ್ನು ಠಾಣೆಯಲ್ಲಿ ಹಾಜರಿದ್ದ ಈ ಕೇಸಿನ 1ರಿಂದ 3ನೇ ಆರೋಪಿತರಿಂದ ವಶಪಡಿಸಿಕೊಂಡಿದ್ದಾಗಿ ಮತ್ತು ಈ ಕೇಸಿನ 1ನೇ ಆರೋಪಿಯು ಕಟಪಾಡಿಯ ಒಂದು ಫೈನಾನ್ಸ್‌ನಲ್ಲಿ ಗಿರವಿ ಇಟ್ಟಿದ್ದು ಅಲ್ಲಿಂದ ತಂದಿರುವುದಾಗಿ ನನಗೆ ಪೋಲೀಸರು ತಿಳಿಸಿರುತ್ತಾರೆ. ಸದ್ರಿ ಹಣವನ್ನು ಯಾರ ಫೈನಾನ್ಸ್‌ನಲ್ಲಿ ಮತ್ತು ಎಷ್ಟು ಹಣಕ್ಕೆ ಅಡ ಇಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಅದಾದ ನಂತರ ನಾನು

ನ್ಯಾಯಾಲಯದಿಂದ ನನ್ನ ಚಿನ್ನದ ಸರವನ್ನು ನನ್ನ ವಶಕ್ಕೆ ಪಡೆದಿದ್ದು ಸದ್ರಿ ಸರವನ್ನು ಈ ದಿನ ಸಾಕ್ಷಿಯು ತಂದಿದ್ದು ಅದನ್ನು ಮು.ಮಾ.1 ಎಂದು ಗುರುತಿಸಿ ನ್ಯಾಯಾಲಯ ಆದೇಶಿಸಿದಾಗ ಸದ್ರಿ ಸರವನ್ನು ಹಾಜರುಪಡಿಸುವ ಷರತ್ತಿನೊಂದಿಗೆ ಸರವನ್ನು ವಾಪಾಸು ಮಾಡಲಾಯಿತು. ನಾನು ಠಾಣೆಗೆ ಹೋದಾಗ ಒಂದು ಬೈಕ್‌ನ್ನು ಸಹ ನೋಡಿದ್ದು ಅದರ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ.

6. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿದ್ದ 2 ಮತ್ತು 3ನೇ ಆರೋಪಿಯನು ನೋಡಿ ಗುರುಸಿರುತ್ತಾರೆ. ಇನ್ನೊಬ್ಬ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದುಲ ಸಾಕ್ಷಿ ನುಡಿದಿದ್ದು 1ನೇ ಆರೋಪಿಯು ಗೈರು ಹಾಜರಿದ್ದು ಅವರ ವಕೀಲರು ಗುರುತಿಸಲು ತಕರಾರು ಇದೆಎಂದು ಹೇಳಿದ ಕಾರಣ ಮುಂದುವರಿದ ಮುಖ್ಯ ವಿಚಾರಣೆಯನ್ನು 200-00 ರೂ. ವೆಚ್ಚದೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.